# ಕಿತ್ತೂರು ಸಂಸ್ಥಾನ: ರಾಣಿ ಚೆನ್ನಮ್ಮಳ ಸಾಂಸ್ಕೃತಿಕ ಪ್ರಜ್ಞೆ

**ಭೋಜೇಗೌಡ ಕೆ.**

ಸಂಶೋಧನಾ ವಿದ್ಯಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್., ಕನ್ನಡ ಸಂಶೋಧನಾ ಕೇಂದ್ರ, ಕೆಂಗೇರಿ, ಬೆಂಗಳೂರು.

**Received: 09/12/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619516**

## ABSTRACT:

ಕನ್ನಡ ಸಾಹಿತ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗಳು ತಮ್ಮದೇ ಆದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತ ಸಂಸ್ಕೃತಿಯ ಹರಿಕಾರರಾಗಿ ಅದರ ಅನುಯಾಯಿಗಳಾಗಿ ಮತ್ತು ಆಚರಣೆಯ ಸಂಪನ್ಮೂಲ ವ್ಯಕ್ತಿಗಳಾಗಿ ಕಂಡು ಬರುತ್ತಾರೆ. ಅವರಲ್ಲಿ ಪ್ರಮುಖರಾಗಿ ಕಂಡು ಬರುವ ವ್ಯಕ್ತಿಗಳಲ್ಲಿ ಕಿತ್ತೂರುರಾಣಿ ಚೆನ್ನಮ್ಮ ಸಂಸ್ಕೃತಿಯನ್ನು ಅನುಸರಿಸುತ್ತಾ, ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ಆಚರಿಸುವ ಹಬ್ಬ, ಹರಿದಿನಗಳು, ಜಾತ್ರೆಗಳು, ಮಠಗಳ ಸಂಸ್ಕೃತಿ ಮತ್ತು ನಾಡಿನ ಸಂಸ್ಕೃತಿಗಳ ಅನಾವರಣ ಈ ಕಾದಂಬರಿಯಲ್ಲಿ ಪ್ರತಿಬಿಂಬಿತವಾಗಿರುವುದನ್ನು ಚಿತ್ರಿಸಲಾಗಿದೆ.

## KEYWORDS:

ಮಲ್ಲೇಂದ್ರ ಭೂಪತಿ, ಚೆನ್ನಮ್ಮ, ಕಿತ್ತೂರು, ಸಾಂಸ್ಕೃತಿಕ ಪ್ರಜ್ಞೆ, ರುದ್ರಮ್ಮ, ಬ್ರಿಟಿಷರು.

ಕರುನಾಡಿನ ಇತಿಹಾಸದಲ್ಲಿ ಹೆಚ್ಚು ಖ್ಯಾತಿಯನ್ನು ಪಡೆದು ಪ್ರಸಿದ್ಧಳಾದ ಕಿತ್ತೂರು ರಾಣಿ ಚೆನ್ನಮ್ಮಳು ಬಾಲ್ಯದಿಂದಲೂ ಬಿಲ್ವಿದ್ಯೆ ಮತ್ತು ಬೇಟೆಯಾಡುವುದರಲ್ಲಿ ಹೆಚ್ಚು ಪ್ರವೀಣೆಯಾಗಿದ್ದಳು. ಈ ಗುಣಗಳು ತನ್ನ ಅಪ್ಪನಿಂದ ಬಳುವಳಿಯಾಗಿ ಬಂದಿದ್ದವು. ಇಂತಹ ವಿದ್ಯೆಗಳನ್ನು ರೂಢಿಸಿಕೊಂಡ ಚೆನ್ನಮ್ಮಳು ಕಿತ್ತೂರು ಸಂಸ್ಥಾನವನ್ನು ಬ್ರಿಟಿಷರ ಕೈಗೆ ಯಾವುದೇ ಕಾರಣಕ್ಕೂ ಒಪ್ಪಿಸಬಾರದೆಂದು ಶತಾಯಗತಾಯ ಪ್ರಯತ್ನ ಮಾಡುತ್ತಲೇ ಬಂದಳು. ಆದರೂ ಕುತಂತ್ರ ರಾಜಕಾರಣದಿಂದ ತನ್ನವರಿಂದಲೇ ಮೋಸ ಹೋಗಿ ಅನ್ಯಾಯವಾಗಿ ಬ್ರಿಟಿಷರಿಗೆ ಒಪ್ಪಿಸುವಂಥ ದುಸ್ಥಿತಿ ಬಂದದ್ದು ದುರಂತದ ಸಂಗತಿಯಾಗಿದೆ. ಇಷ್ಟೆಲ್ಲ ನೋವುಗಳ ನಡುವೆ ತನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟಾಗದಂತೆ ಪ್ರೀತಿ, ವಿಶ್ವಾಸ, ನಂಬಿಕೆಗೆ ಪಾತ್ರಳಾಗಿದ್ದಾಳೆಂಬುದನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಮಲ್ಲೇಂದ್ರ ಭೂಪತಿಯು ಚೆನ್ನಮ್ಮಳೊಂದಿಗೆ ವಿವಾಹವಾದಾಗ ಆಕೆ ಮೂಲತಃ ದಂತದ ಗೊಂಬೆಯಂತೆ ಕಾಣುತ್ತಿದ್ದಳು. ಆಭರಣಗಳಿಲ್ಲದೇ ಸೌಂದರ್ಯದ ರಾಶಿಯಾಗಿದ್ದಳು. ಮದುವೆ ಸಂದರ್ಭದಲ್ಲಿ ಚಿನ್ನ ವಜ್ರದಿಂದ ಸಿಂಗಾರಗೊಂಡಾಗ ದೇವಲೋಕದಿಂದ ಧರೆಗಿಳಿದ ಊರ್ವಶಿಯಂತೆಯೇ ಕಾಣುತ್ತಿದ್ದಳು. ಇಂತಹ

ಸುಂದರ ರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡಾಗ ಚೆನ್ನಮ್ಮಳಿಗೆ ಆಶ್ಚರ್ಯವೆನಿಸುವಷ್ಟು ಸುಂದರವತಿಯಾಗಿ ಕಾಣುತ್ತಿದ್ದೇನೆ ಎಂದುಕೊಂಡಳು. ಆಕೆಯ ಅಲಂಕಾರದ ವರ್ಣನೆಯು ಸಾಂಸ್ಕೃತಿಕ ಪ್ರಜ್ಞೆಯನ್ನು ಪ್ರತಿಬಿಂಬಿಸಿರುವುದು ಈ ರೀತಿಯಲ್ಲಿದೆ.

"ಕೊರಳಲ್ಲಿ ಧರಿಸಿದ ರತ್ನ ಮಿಶ್ರಿತ ಚಿನ್ನದ ಸರಗಳು, ವಜ್ರದ, ಚಿನ್ನದ ಆಭರಣಗಳು, ಕಿವಿಯಲ್ಲಿ ಝುಗಮಗಿಸುವ ವಜ್ರದ ಓಲೆಗಳು, ದಟ್ಟವಾದ ಕೂದಲು, ಆ ಕೂದಲಿಗೆ ದಪ್ಪವಾಗಿದ್ದ ನಾಗರು, ನಡುವಿಗೆ ಹಾಕಿಕೊಳ್ಳುವ ಪಟ್ಟಿ ಒಡ್ಯಾಣ, ರಟ್ಟೆಗೆ ಹಾಕಿ ಕೊಳ್ಳುವ ತೋಳಬಂದಿ, ಬಿಳಿ ಮಿಶ್ರಿತ ಗೋದಿ ಬಣ್ಣದ ಮೊಳ ಕೈಗೆ ಶೋಭಾಯಮಾನವಾಗಿದ್ದ ಕೇಯೂರ, ಅದೇ ಸುಂದರವಾದ ಕೈಗೆ ಪಾಟಲಿ, ತಲಾ ಒಂದು ಕೈಗೆ ಎರಡು ಬಿಲ್ವಾರಗಳು, ಅದೇ ರೀತಿ ಕಾಲಿಗೆ ಹಾಕಿಕೊಳ್ಳುವ ಬೆಳ್ಳಿಯ ತೋಡ, ಕಿರುಗೆಜ್ಜೆ, ಸರಪಳಿ, ಕಾಲಂದಿಗೆಗಳು, ಆಕರ್ಷಿಸುವ ಸುಂದರವಾದ ಹತ್ತು ಬೆರಳುಗಳ ಪೈಕಿ ನಡು ಬೆರಳಿನ ಎರಡೂ ಪಕ್ಕದ ಬೆರಳುಗಳಿಗೆ ತಲಾ ಮೂರು ಉಂಗುರಗಳಂತೆ, ಎರಡು ಅಂಗೈಯಲ್ಲಿರುವ ಒಟ್ಟು ಆರು ಉಂಗುರುಗಳು, ಆರು ಉಂಗುರಗಳ ಪೈಕಿ ನಾಲ್ಕು ಉಂಗುರುಗಳು ಮೌಲ್ಯಯುತವಾದ ಹರಳುಗಳನ್ನು ಹೊಂದಿದ್ದರೆ ಇನ್ನೆರಡು ಉಂಗುರಗಳು ವಜ್ರಗಳನ್ನು ಒಳಗೊಂಡಿದ್ದವು. ಮೌಲ್ಯಯುತವಾದ ಆದರೆ ಚಿಕ್ಕ ವಜ್ರದ ವೆಲಾರಿಗೆ ಹಾಕಿದ ನತ್ತು ಈ ಎಲ್ಲಾ ಆಭರಣಗಳಿಂದ ಅಲಂಕೃತಳಾದ ಚೆನ್ನಮ್ಮ ನೋಡಿದ ಯಾರೇ ಆಗಲಿ ಸಾಕ್ಷಾತ್ ಲಕ್ಷ್ಮಿಯ ಅವತಾರವಾಗಿದ್ದಾಳೆ".[1]

ಈ ರೀತಿಯಾಗಿ ಚೆನ್ನಮ್ಮಳು ವಜ್ರ ಹಾಗೂ ಚಿನ್ನದ ಆಭರಣಗಳಿಂದ ಅಲಂಕೃತಗಳಾಗಿ ಶೃಂಗಾರವೇ ಇವಳನ್ನು ನೋಡಿ ನಾಚುವಂತಹ ಸೌಂದರ್ಯದ ರಾಶಿ ಈಕೆಯಲ್ಲಿ ಮೇಳೈಸಿಕೊಂಡಿತ್ತು. ಅಪ್ಸರೆಯಂತಹ ರೂಪವನ್ನು ಹೊಂದಿದ್ದ ಚೆನ್ನಮ್ಮ ಅಪ್ಪಟ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಮಾದರಿ ಸ್ತ್ರೀಯಾಗಿ ಇಲ್ಲಿ ಚಿತ್ರಿತಳಾಗಿದ್ದಾಳೆ.

ನವದಂಪತಿಗಳನ್ನು ಬರಮಾಡಿಕೊಳ್ಳಲು ಕಿತ್ತೂರಿನ ಜನರು ಬಹಳ ಉತ್ಸುಕರಾಗಿದ್ದರು. ಅಂದು ಕಿತ್ತೂರಿಗೆ ಕಿತ್ತೂರೇ ಸಂಭ್ರಮ ಸಡಗರದಲ್ಲಿ ತೇಲುತ್ತಿತ್ತು. ತಮ್ಮ ತಮ್ಮ ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿದ್ದರು. ಮಾವಿನ ಎಲೆಗಳಿಂದ ತಳಿರು ತೋರಣವನ್ನು ಕಟ್ಟಿ, ಬಾಳೆಗೊನೆ ಗಿಡದೊಂದಿಗೆ ಇಡೀ ಕಿತ್ತೂರೇ ಸಿಂಗಾರಗೊಂಡಿತ್ತು. ನವ ವಧು-ವರರಿಗೆ ಮುತ್ತೈದೆಯರು ಮಂಗಳಾರತಿ ಮಾಡಿ ಹೃದಯ ಪೂರ್ವಕವಾಗಿ ಸ್ವಾಗತಿಸಲು ಸಿದ್ದರಿದ್ದರು. ಮಲ್ಲೇಂದ್ರ ಭೂಪತಿಯು ದೇವಲೋಕದಿಂದ ಇಳಿದು ಬಂದ ಕಿನ್ನರರಂತೆ ಕಾಣುತ್ತಿದ್ದನು. ಇಂತಹ ಸುಂದರನಾದ,

ವೀರನಾದ ಪುರುಷನನ್ನು ಕೈ ಹಿಡಿದು ಬಾಳ ಸಂಗಾತಿಯನ್ನಾಗಿ ಪಡೆದ ನಾನೇ ಧನ್ಯಳು ಎಂಬ ಭಾವನೆ ಆಕೆಯಲ್ಲಿ ಮನಸ್ಸಿನಲ್ಲಿ ಕಂಡು ಬಂದಿರುವುದನ್ನು ಇಲ್ಲಿ ಚಿತ್ರಿಸಲಾಗಿದೆ.

ಮೊದಲ ಪತ್ನಿಯಾದ ರುದ್ರಮ್ಮಳು ತನ್ನ ತವರು ಮನೆಯಾದ ಸಂಗೊಳ್ಳಿ ಅರಮನೆಯಲ್ಲಿ ಮರಣವನ್ನು ಹೊಂದುತ್ತಾಳೆ. ನಂತರ ಮಲ್ಲೇಂದ್ರ ಭೂಪತಿ ಮಲಪ್ರಭಾ ನದಿದಡದಲ್ಲಿ ಇವರಿಗೊಂದು ಸಮಾಧಿ ಕಟ್ಟಿಸುತ್ತಾನೆ. ಪ್ರತಿ ಮಹಾನವಮಿಯಂದು ಚೆನ್ನಮ್ಮಳು ತನ್ನ ಅಕ್ಕನ ಸಮಾಧಿ ಬಳಿ ಬಂದು ಹಣ್ಣು, ಕಾಯಿ, ವಿವಿಧ ಭಕ್ಷ್ಯಗಳಿಟ್ಟು, ರೇಷ್ಮೆ ಸೀರೆ ಸಮಾಧಿ ಮೇಲಿಟ್ಟು, ಬಹಳ ಪ್ರೀತಿಯಿಂದ ರುದ್ರಮ್ಮಳ ಸಮಾಧಿಗೆ ಪೂಜೆ ಸಲ್ಲಿಸುತ್ತಿದ್ದಳು. ಸವತಿ ಮಾತ್ಸರ್ಯದ ಮನೋಭಾವ ಕಿಂಚತ್ತು ಚೆನ್ನಮ್ಮಳಲ್ಲಿರಲಿಲ್ಲ. ಸಮಾಧಿಯ ಪೂಜೆ ಕೇವಲ ಒಂದು ದಿನಕ್ಕೆ ಸೀಮಿತವಾಗಿರಬಾರದೆಂದು ಪ್ರತಿನಿತ್ಯ ಪೂಜೆ ಮಾಡುವ ಸಲುವಾಗಿ ಜಂಗಮರನ್ನು ಚೆನ್ನಮ್ಮಳೇ ನೇಮಕ ಮಾಡಿದ್ದಳು. ಈ ಪೂಜಾ ಕಾರ್ಯಕ್ಕಾಗಿ ಕಿತ್ತೂರಿನ ಖಜಾನೆಯಿಂದ ಎಣ್ಣೆ ಹಾಗೂ ಇತರೆ ಖರ್ಚಿನ ಸಲುವಾಗಿ ಹಣ, ಬಟ್ಟೆ ಇತ್ಯಾದಿ ವಸ್ತುಗಳನ್ನು ಕಳಿಸಿಕೊಡುತ್ತಿದ್ದಳು.

ಹೀಗೆ ಚೆನ್ನಮ್ಮಳಲ್ಲಿ ಮಲ್ಲೇಂದ್ರ ಭೂಪತಿಯ ಮೊದಲ ಪತ್ನಿ ರುದ್ರಮ್ಮಳ ಸಮಾಧಿಗೆ ನಾನೇಕೆ ಇಷ್ಟೆಲ್ಲಾ ಜವಬ್ದಾರಿಯಿಂದ ಪೂಜಾ ಕೈಂಕರ್ಯ ಕೈಗೊಳ್ಳಬೇಕು, ಅವಳು ಸತ್ತರೆ ಸಾಯಲಿ ಬಿಡಿ, ಅರಮನೆ, ಹಣ, ಸಂಪತ್ತು ತನ್ನದಾಯಿತು. ತನ್ನ ಗಂಡ ಈಗ ನನ್ನೊಬ್ಬಳ ಸ್ವತ್ತು ಮಾತ್ರ ಎಂದೇ ಸಂಕುಚಿತ ಮನಸ್ಸಿಲ್ಲದೇ, ವಿಶಾಲವಾದ ಹೃದಯ ವೈಶಾಲ್ಯತೆ ಅವಳಲ್ಲಿತ್ತು. ಇಲ್ಲಿ ಚೆನ್ನಮ್ಮಳ ಸಾಂಸ್ಕೃತಿಕ ಬದುಕು ಇತರ ಮನಸ್ಸುಗಳೊಂದಿಗೆ ಬೆಸೆದುಕೊಂಡಿರುವುದನ್ನು ಗುರುತಿಸಲಾಗಿದೆ.

ಚೆನ್ನಮ್ಮಳು ಕಿತ್ತೂರಿನ ಸಂಸ್ಥಾನದ ಉತ್ತರಾಧಿಕಾರಕ್ಕಾಗಿ ಯಾರನ್ನು ನೇಮಕ ಮಾಡಬೇಕೆಂದು ಯೋಚಿಸುತ್ತಿರುವಾಗ ತನ್ನ ಸವತಿ ರುದ್ರಮ್ಮಳ ಮಗನಾದ ಶಿವಲಿಂಗರುದ್ರಸರ್ಜನಿಗೆ ಪಟ್ಟಕಟ್ಟಿ ಉತ್ತರಾಧಿಕಾರಿಯನ್ನಾಗಿ ನೇಮಿಸಬೇಕೆಂಬ ಮನೋಭಾವನೆ ಈಕೆಯಲ್ಲಿತ್ತು. ಪಟ್ಟಾಭಿಷೇಕ ಮಾಡದೇ, ತನ್ನ ಸ್ವಂತ ಮಗನಾದ ಶಿವಬಸಪ್ಪನಿಗೆ ಚೆನ್ನಮ್ಮಳು ಮಲತಾಯಿ ಧೋರಣೆಯನ್ನು ಅನುಸರಿಸುತ್ತಾಳೆ ಎಂಬ ಭಾವನೆ ಕಿತ್ತೂರಿನ ಜನತೆಯಲ್ಲಿತ್ತು. ಅಪಕೀರ್ತಿಗೆ ಒಳಗಾಗಬಾರದೆಂಬ ಮುಂದಾಲೋಚನೆಯಿಂದ ಶಿವಲಿಂಗರುದ್ರಸರ್ಜನಿಗೆ ಪಟ್ಟ ಕಟ್ಟಲು ಮುಂದಾಗುತ್ತಾಳೆ. ತನ್ನ ಮಗನಿಗೆ 'ಭೈರವಕಂಕಣ' ಕಟ್ಟಿ ಸರಳತೆಯ ಸಂಕೇತದವಳಂತೆ ಕಂಡು ಬಂದಿದ್ದಾಳೆ. ಶಿವಲಿಂಗರುದ್ರಸರ್ಜನಿಗೆ ಜವಬ್ದಾರಿ ಮತ್ತು ಆತನ ಮನಸ್ಸು ಬದಲಾಗಬೇಕೆಂದು ಪಟ್ಟಾಭಿಷೇಕ ಮಾಡಲಾಯಿತು. ಕಲ್ಲು ಮಠದ ಶ್ರೀಗಳು ಇದಕ್ಕೆ

ಅನುಮತಿ ಸೂಚಿಸಿದರು. ಚೆನ್ನಮ್ಮಳ ನಿರ್ಧಾರವನ್ನು ಮನಸಾರೆ ಒಪ್ಪಿಕೊಂಡು ಶಿವಲಿಂಗರುದ್ರಸರ್ಜನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸುತ್ತಾರೆ. ಇಂತಹ ಮಾತೃ ಸಂಸ್ಕೃತಿ ಚೆನ್ನಮ್ಮಳಲ್ಲಿ ಕಂಡು ಬಂದಿರುವುದನ್ನು ವಾಖ್ಯಾನಿಸಲಾಗಿದೆ.

ಶಿವಲಿಂಗರುದ್ರಸರ್ಜನಿಗೆ ಪಟ್ಟಾಭಿಷೇಕವಾದರೂ ವ್ಯಕ್ತಿತ್ವದಲ್ಲಿ ಮಾತ್ರ ಯಾವುದೇ ಬದಲಾವಣೆ ಆಗಲಿಲ್ಲ. ವೀರಮ್ಮ ಎಂಬ ಅಪ್ಪಟ ಸಂಸ್ಕೃತಿಯುಳ್ಳ ಸ್ತ್ರೀಯೊಂದಿಗೆ ಮದುವೆ ಮಾಡಿಸುತ್ತಾಳೆ. ದೇವರ ಶಾಪವೋ ಅಥವಾ ಶಿವಲಿಂಗರುದ್ರಸರ್ಜನ ಕರ್ಮವೋ ಒಟ್ಟಿನಲ್ಲಿ ಅವನಿಗೆ ಮಕ್ಕಳಾಗದಿರುವುದು ಅವನಿಗಿಂತ ಹೆಚ್ಚಿನ ಚಿಂತೆ ಚನ್ನಮ್ಮಳನ್ನು ಕಾಡುತ್ತದೆ. ಕ್ರಮೇಣ ಶಿವಲಿಂಗರುದ್ರಸರ್ಜನ ಆರೋಗ್ಯವೂ ದಿನೇ ದಿನೇ ಹದಗೆಟ್ಟು ಸಂಪೂರ್ಣ ಹಾಳಾಗಿ ಸಾವಿಗೆ ಸಮೀಪವಾಗುತ್ತಾನೆ.

ಆಗ 'ದತ್ತಕ' ದ ಸಂಪ್ರದಾಯದ ಮೊರೆಹೋಗುತ್ತಾನೆ. ದತ್ತಕ ತೆಗೆದುಕೊಂಡು ವಿಧಿ ವಿಧಾನಗಳಂತೆ ಹುಡುಗನಿಗೆ ದೇಸಾಯಿಯ ರಾಜಮುದ್ರೆ ನೀಡಿ ಅವನನ್ನು ಅಲಂಕರಿಸಲಾಯಿತು. ಮುಂದೆ 'ಸವಾಯಿಮಲ್ಲಸರ್ಜ' ಎಂಬ ಹೆಸರಿನಿಂದ ಕಿತ್ತೂರು ರಾಜ್ಯದ ಉತ್ತರಾಧಿಕಾರಿಯಾಗಿ ನೇಮಕವಾಗುತ್ತಾನೆ. ಶಿವಲಿಂಗರುದ್ರಸರ್ಜನು ಮಾಡಿದ ಈ ಸತ್ಕಾರ್ಯವನ್ನು ಕಂಡು ಚನ್ನಮ್ಮಳಲ್ಲಿ ವಿಶೇಷವಾದ ಅಭಿಮಾನ ಹುಟ್ಟಲು ಕಾರಣವಾಗುತ್ತದೆ. ಬೇಜವಾಬ್ದಾರಿತನ ಹಾಗೂ ಅಹಂಕಾರಿಯಾದ ಶಿವಲಿಂಗರುದ್ರಸರ್ಜನು ತನ್ನ ಮರಣ ನಂತರ ಕಿತ್ತೂರು ಬೇರೆಯವರ ಪಾಲಾಗಬಾರದೆಂಬ ಮುಂದಾಲೋಚನೆ ಮಾಡಿ, ದತ್ತಕ ಕ್ರಿಯೆಯ ಸಂಸ್ಕೃತಿಯನ್ನು ಪರಿಚಯಿಸುವುದರ ಮೂಲಕ ಕಿತ್ತೂರನ್ನು ಉಳಿಸಿಕೊಂಡನಲ್ಲ ಎಂಬ ವಿಚಾರ ಈಕೆಯಲ್ಲಿ ಹೆಮ್ಮೆಯ ಸಂಗತಿಯಾಗಿ ಉಳಿಯುವಂಥದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ನಂತರ ಕಿತ್ತೂರಿನ ಸೈನಿಕರು ಬ್ರಿಟಿಷ್ ಸೈನಿಕರ ಮೇಲೆ ದಾಳಿ ಮಾಡಿ ಅವರನ್ನು ಕೊಂದು, ಅವರ ಪರಿವಾರದ ಮಕ್ಕಳನ್ನು ಸೆರೆಹಿಡಿದು ತಂದಾಗ ಚೆನ್ನಮ್ಮಳು ಆ ಪುಟ್ಟ ಮಕ್ಕಳನ್ನು ಕುರಿತು ಈ ರೀತಿಯಾಗಿ ಸಮಾಧಾನ ಮಾಡುತ್ತಾಳೆ.

"ನೀವು ಹೆದರಬೇಡಿ, ನೀವೂ ನಮ್ಮ ಕುಟುಂಬದ ಪರಿವಾರದವರೇ, ಈ ಮಕ್ಕಳು ನಾನು ಹೆತ್ತ ಮಕ್ಕಳೇ, ನಿಮಗೇನೂ ನಾವು ಮಾಡುವುದಿಲ್ಲ ಎನ್ನುತ್ತಾಳೆ"[2]

ಹೀಗೆ ಶತ್ರುಗಳ ಮಕ್ಕಳನ್ನು ಸೆರೆಹಿಡಿದು ತಂದ ಸೈನಿಕರನ್ನು ಹೊಗಳದೇ ಆ ಮಕ್ಕಳನ್ನು ಕುರಿತು ನೀವೂ ನನ್ನ ಸ್ವಂತ ಮಕ್ಕಳಂತೆ ಎಂಬ ಮಾತು ಮಾತೃಸಹೃದಯಿ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಶತ್ರುವಿನ ಮಕ್ಕಳಾಗಲೀ, ಸಂಬಂಧಿಕರಾಗಲೀ, ಶತ್ರುಗಳಂತೆ ಕಾಣದೇ ಮಿತ್ರತ್ವದ ಭಾವನೆಯಿಂದ ನೋಡುವ ಚೆನ್ನಮ್ಮಳ ವ್ಯಕ್ತಿತ್ವ ನಿಜಕ್ಕೂ ಅನುರೂಪವಾದದ್ದು. ಆ ಮಕ್ಕಳು ಇಂದಿಗೆ ತಮ್ಮ ಕಥೆ ಮುಗಿಯಿತೆಂದು

ಹೆದರಿ ಆತಂಕದಲ್ಲಿದ್ದಾಗ ಧೈರ್ಯ ತುಂಬಿದವಳು. ಮಕ್ಕಳ ಮುಗ್ಧ ಪ್ರೀತಿ ಎಂತಹ ಕಠೋರ ಮನಸ್ಸನ್ನು ಮೃದು ಮನಸ್ಸಾಗಿ ಪರಿವರ್ತಿಸುತ್ತದೆ ಎನ್ನುವುದಕ್ಕೆ ಚೆನ್ನಮ್ಮಳೇ ನಿದರ್ಶನವಾಗಿದ್ದಾಳೆ.

ಮನುಷ್ಯನು ಮನುಷ್ಯತ್ವವನ್ನು ಮರೆಯಬಾರದು. ಈ ಮಕ್ಕಳಿಗೆಲ್ಲಾ ಇಂದು ನಮ್ಮ ಅರಮನೆಯ ಅಡುಗೆ ಮನೆಯಲ್ಲಿ ವಿಶೇಷ ತಿಂಡಿ–ತಿನಿಸುಗಳ ಸಿದ್ಧತೆಯಾಗಲೀ, ಜೊತೆಗೆ ನಿದ್ರಿಸಲು ಸಕಲ ಸಿದ್ಧತೆಯಾಗಬೇಕು ಎಂದು ಚೆನ್ನಮ್ಮ ತನ್ನ ಸೇವಕರಿಗೆ ಆದೇಶಿಸುತ್ತಾಳೆ. ಈ ವಿಷಯ ತಿಳಿದ ಥ್ಯಾಕರೆಗೆ ತುಂಬಾ ಖುಷಿಯಾಗುತ್ತದೆ. ಆಗ ಪ್ರತಿಯಾಗಿ ಚೆನ್ನಮ್ಮಳಿಗೆ ಹನ್ನೊಂದು ಗ್ರಾಮಗಳ ಇನಾಮು ಕೊಟ್ಟು ಸ್ನೇಹ ಬೆಳೆಸುವುದಾಗಿ ಪತ್ರ ಬರೆಯುತ್ತಾನೆ. ಥ್ಯಾಕರೆಯ ಮನಸ್ಸಿನ ಕುತಂತ್ರವನ್ನು ಅರಿತ ಚೆನ್ನಮ್ಮ ನಿಮ್ಮ ಇನಾಮು ಬಯಸಿ, ನಿಮ್ಮ ಮಕ್ಕಳನ್ನು ನಾವು ಅತಿಥಿ ಸತ್ಕಾರ ಮಾಡಲಿಲ್ಲ, ಮಕ್ಕಳೆಂದರೆ ದೇವರಿಗೆ ಸಮಾನ. ಅವರಿಗೆ ಸಲ್ಲಬೇಕಾದ ಗೌರವ ಮತ್ತು ಪ್ರೀತಿ ಸಲ್ಲಿಸಿದ್ದೇವೆ. ಅದಕ್ಕೆ ನಿಮ್ಮಿಂದ ಹಣವಾಗಲೀ ಅಥವಾ ಸಂಪತ್ತಿನ ನಿರೀಕ್ಷೆಯಾಗಲೀ ಯಾವುಧೂ ಬೇಡ. ಅವರೆಲ್ಲಾ ನನಗೆ ಸ್ವಂತ ಮಕ್ಕಳಂತೆ, ನಿಮ್ಮ ಬಳಿ ಈ ಇನಾಮನ್ನು ಪಡೆದರೆ ನಮ್ಮ ಸಂಸ್ಕೃತಿಯನ್ನು ಮಾರಿಕೊಂಡಂತೆ ಎಂಬ ಅಭಿಪ್ರಾಯ ವ್ಯಕ್ತಪಡಿಸುವುದನ್ನು ಶೋಧನೆಗೆ ಒಳಗು ಮಾಡಲಾಗಿದೆ.

ಕಿತ್ತೂರಿನ ಜನರು ಮಹಾನವಮಿ ಹಬ್ಬವನ್ನು ಬಹಳ ಸಂಭ್ರಮ ಸಡಗರದಿಂದ ಆಚರಿಸುತ್ತಿದ್ದರು. ಬ್ರಿಟಿಷರು ಕಿತ್ತೂರಿನ ಸಮೀಪದಲ್ಲಿ ಬೀಡು ಬಿಟ್ಟಿದ್ದರು. ತಲತಲಾಂತರದಿಂದ ಈ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದರು. ಈ ಮಹಾನವಮಿ ಹಬ್ಬದಂದು ಅರಮನೆಯಲ್ಲಿನ ಆಯುಧಗಳಿಗೆಲ್ಲಾ ಪೂಜೆ ಸಲ್ಲಿಸುತ್ತಿದ್ದರು. ಸಂಜೆಯ ವೇಳೆಗೆ ಕಿತ್ತೂರಿನ ಜನರು ಅರಮನೆಯತ್ತ ಬಂದಾಗ ಬನ್ನಿ ಮುಡಿಯುವ ಸಂಪ್ರದಾಯವನ್ನು ತಪ್ಪದೆ ಪರಿಪಾಲಿಸುತ್ತಿದ್ದರು. ಈ ಬಾರಿ ಯುದ್ಧದ ಬಿಸಿ ವಾತಾವರಣ ಇರುವುದರಿಂದ ಈ ಹಬ್ಬವನ್ನು ಜೋರಾಗಿ ಆಚರಿಸಲು ಸಾಧ್ಯವಾಗಲಿಲ್ಲ. ಕಿತ್ತೂರಿನ ಸರದಾರರು, ಸುಬೇದಾರರು, ಊರಿನ ಹಿರಿಯರು, ಗಣ್ಯ ವ್ಯಕ್ತಿಗಳು, ವ್ಯಾಪಾರಸ್ಥರು ಹೀಗೆ ಕೆಲವೇ ಕೆಲವು ಮಂದಿ ಸೇರಿ ಅರಮನೆಯಲ್ಲಿ ಹಬ್ಬವನ್ನು ಆಚರಿಸುತ್ತಿದ್ದರು. ಚೆನ್ನಮ್ಮಳು ಹಬ್ಬವನ್ನು ತಪ್ಪದೇ ಆಚರಿಸುತ್ತಿರುವುದು ಹೇಳಬಹುದಾಗಿದೆ. ಯುದ್ಧ ಸನಿಹದಲ್ಲಿರುವ ಕಾರಣ ಹಬ್ಬದ ಆಚರಣೆಗೆ ನಿಷೇಧ ಹೇರದೇ ಮಹಾನವಮಿ ಹಬ್ಬದ ಮಹತ್ವ ಅರಿತು, ಅದರ ಆಚರಣೆಗೆ ಮುಂದಾಗುವ ಚೆನ್ನಮ್ಮಳು ಸಂಸ್ಕೃತಿಯನ್ನು ಅನುಕರಿಸುವ ಪ್ರತೀಕವೆನಿಸುತ್ತಾಳೆ.

ಚೆನ್ನಮ್ಮಳು ಬ್ರಿಟಿಷರಿಂದ ಕಿತ್ತೂರನ್ನು ಉಳಿಸಿಕೊಳ್ಳಬೇಕು. ಕಿತ್ತೂರಿನ ಜನತೆಗಾಗಿ ತನ್ನ ಪ್ರಾಣವನ್ನು ತ್ಯಾಗ ಮಾಡಲು ಸಿದ್ಧವಿದ್ದಳು. ಬೆಳಗಿನ ಜಾವದಲ್ಲಿ

ಆಕೆಗೊಂದು ಕನಸು ಬೀಳುತ್ತದೆ. ಬ್ರಿಟಿಷರೊಂದಿಗೆ ಹೋರಾಟ ಮಾಡುತ್ತಿರಬೇಕಾದರೆ ಈಕೆಯ ಅಂಗರಕ್ಷಕನಾದ ಬಾಳಪ್ಪನನ್ನು ಶತ್ರುಪಡೆ ಕೊಂದು ಹಾಕುತ್ತದೆ. ಆಗ ಬೆಚ್ಚಿಬಿದ್ದ ಚೆನ್ನಮ್ಮಳು ಕಿತ್ತೂರಿನ ಅರಮನೆಯಲ್ಲಿರುವ ಮಲಗುವ ಕೊಠಡಿಯಲ್ಲಿರುತ್ತಾಳೆ. ಈ ವಿಚಾರವನ್ನು ಕಲ್ಲುಮಠದ ಶ್ರೀಗಳಲ್ಲಿ ಹೇಳಿಕೊಂಡಾಗ, ಅವರು ಈ ರೀತಿಯಾಗಿ ಆಕೆಯನ್ನು ಸಮಾಧಾನಪಡಿಸುತ್ತಾರೆ.

ಕನಸುಗಳು ನಿದ್ದೆಯ ಒಂದು ಭಾಗ ತಾಯಿ. ರಕ್ತ ಚರ್ಮಕ್ಕೆ ಅಂಟಿರುವ ಸಂಬಂಧವೇ ಈ ನಿದ್ದೆಗೂ ಕನಸಿಗೂ ಇದೆ. ಕನಸುಗಳೆಂದರೆ ಕೆಲವರ ಅನುಭವ. ಧ್ವನಿ, ಸ್ಪರ್ಶ, ರುಚಿ, ವಾಸನೆ, ಭಾವನೆಗಳ ಸಂಗಮ ಎಂದು ತಿಳಿಯುತ್ತಾರೆ. ಎಚ್ಚರವಿದ್ದಾಗ ಮನುಷ್ಯ ಅನುಭವಿಸುವ ಅನುಭವವನ್ನು ಕನಸಿನಲ್ಲಿ ಅನುಭವಿಸುತ್ತಾನೆ. ಭಯದ ಕನಸು ಬಿದ್ದಾಗ ಎದ್ದು ಕೂಡುವುದು, ಸಂತಸದ ಕನಸುಗಳು ಬಿದ್ದಾಗ ನಿದ್ದೆಗಣ್ಣಿನಲ್ಲಿಯೇ ನಗುವುದು, ಜಾತ್ರೆ ಮುಂತಾದ ಸನ್ನಿವೇಶಗಳು ಕನಸಿನಲ್ಲಿ ಬಂದಾಗ ಕೇಕೆ ಹಾಕುವುದು ಹೀಗೆ ಕನಸುಗಳು ಬೀಳುತ್ತವೆ. ಇನ್ನು ಕೆಲವು ಕನಸುಗಳು ವರ್ಣರಂಜಿತ ಕನಸುಗಳಾದರೆ, ಖಿನ್ನತೆ ಸಂದರ್ಭದಲ್ಲಿಯೂ ಕನಸುಗಳು ಕಪ್ಪು ಬಿಳುಪಿನ ಕನಸುಗಳೆಂದೇ ತಿಳಿಯಲಾಗಿದೆ ಎಂದು ಹೇಳಿದರು.

ಹೀಗೆ ಕಲ್ಲು ಮಠದ ಶ್ರೀಗಳು ಚೆನ್ನಮ್ಮಳಿಗೆ ಕನಸಿನ ಕುರಿತು ಅರ್ಥಪೂರ್ಣವಾದ ಮಾತುಗಳನ್ನು ಹೇಳಿ ಸಂತೈಸುತ್ತಾರೆ. ಆಕೆಯ ಮನಸ್ಸಿನಲ್ಲಿದ್ದ ಕಳವಳ ಆತಂಕವಂತೂ ಇದ್ದೇ ಇರುತ್ತದೆ. ಮುಂದೆ ಭವಿಷ್ಯದಲ್ಲಿ ಈಕೆಯ ಕನಸಿನಂತೆಯೇ ಬ್ರಿಟಿಷ್ ಸೈನ್ಯದ ಕುತಂತ್ರಕ್ಕೆ ಬಲಿಯಾಗಿ ಚೆನ್ನಮ್ಮಳನ್ನು ಉಳಿಸಲು ಹೋಗಿ ಬಾಳಪ್ಪ ಮರಣ ಹೊಂದುತ್ತಾನೆ. ಚೆನ್ನಮ್ಮಳಲ್ಲಿ ಬಾಳಪ್ಪನ ಮರಣ ವಿಚಾರ ಕನಸಿನ ರೂಪದಲ್ಲಿ ದರ್ಶನವಾಗುವುದು. ಅದರ ಬಗೆಗಿನ ತಳಮಳ ಕೊನೆಗೆ ತನ್ನ ಕನಸಿನಂತೆಯೇ ನಡೆಯುವ ದೃಶ್ಯ ನಿಜಕ್ಕೂ ಕಾಕತಾಳೀಯ ನ್ಯಾಯದಂತೆ ನಡೆಯತ್ತದೆ. ನಿರೀಕ್ಷಿತ ಘಟನೆಯ ಪ್ರತೀಕವೋ ಅಥವಾ ಅನಿರೀಕ್ಷಿತ ಘಟನೆಯ ಪ್ರತೀಕವೋ ಒಂದು ತಿಳಿಯದಂತಹ ಚಿಂತೆ ಚೆನ್ನಮ್ಮಳ ಮನಸ್ಸಿನಲ್ಲಿ ಕಂಡು ಬಂದಿರುವುದನ್ನು ಗುರುತಿಸಲಾಗಿದೆ.

ರಾಯಣ್ಣನು ಕಿತ್ತೂರನ್ನು ಬ್ರಿಟಿಷರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಲು ನಿರಂತರ ಹೋರಾಟ ಮಾಡುತ್ತಿರುತ್ತಾನೆ. ಈತನನ್ನು ಕೊಂದು ಹಾಕಿದ್ದೇವೆಂದು ಬ್ರಿಟಿಷ್ ಸಾರ್ಜೆಂಟ್ ಹೇಳಿದಾಗ ಚೆನ್ನಮ್ಮಳ ಮನಸ್ಸಿಗೆ ಆತಂಕ ಗಾಬರಿಯಾಗುತ್ತದೆ. ಕಿತ್ತೂರಿನ ಕಿಡಿಯಾದ ರಾಯಣ್ಣನು ಬ್ರಿಟಿಷರ ಕುತಂತ್ರಕ್ಕೆ ಬಲಿಯಾದನೇ ಅದು ಅಸಾಧ್ಯ ಎಂಬ ಭರವಸೆಯ ಬೆಳಕು ಆಕೆಯಲ್ಲಿ ಬಂದಾಗ ರಾಯಣ್ಣ ಬದುಕಿದ್ದಾನೆ ಎಂಬ ಸುದ್ದಿ ತಿಳಿದು ಚೆನ್ನಮ್ಮಳ ಮನಸ್ಸು ಖುಷಿಯು ಕಡಲಾಗಿ ಹೋಗುತ್ತದೆ. ನನ್ನ

ಮಗನಾದ ರಾಯಣ್ಣನು ಬ್ರಿಟಿಷರ ಸೆರೆಯಾಗಿ, ಅವರಿಂದ ಮರಣ ಹೊಂದುವುದು ಅಸಾಧ್ಯವಾದ ಮಾತಾಗಿದೆ. ರಾಯಣ್ಣನೇನು ಸಾಮಾನ್ಯ ಪ್ರಜೆಯೇ ಅಲ್ಲ, ಅತ್ಯಂತ ಶೂರ. ಅವನನ್ನು ಬ್ರಿಟಿಷರು ತಮ್ಮ ಕುತಂತ್ರದಿಂದ ಸೆರೆಹಿಡಿದರೂ ಅಲ್ಲಿಂದ ತಪ್ಪಿಸಿಕೊಳ್ಳುವ ಚಾಕಚಕ್ಯತೆ ಅವನಲ್ಲಿದೆ. ಬ್ರಿಟಿಷ್ ಸೈನ್ಯಕ್ಕೆ ರಕ್ತದ ರುಚಿಯನ್ನು ತೋರಿಸುತ್ತಾನೆ. ಕಿತ್ತೂರಿನ ಕೀರ್ತಿ ಪತಾಕೆಯನ್ನು ಆಕಾಶದೆತ್ತರಕ್ಕೆ ಕೊಂಡೊಯ್ಯುವ ರಾಯಣ್ಣನ ಯುದ್ದ ಸಂಸ್ಕೃತಿಯು ಚೆನ್ನಮ್ಮಳ ಅಂತರಾಳದಲ್ಲಿ ಹೊರಹೊಮ್ಮಿರುವುದನ್ನು ಇಲ್ಲಿ ವಾಖ್ಯಾನಿಸಲಾಗಿದೆ.

"ಅದು ನಿಜವೇ, ರಾಯಣ್ಣ. ಹಗುರ ಆಸಾಮಿಯಂತೂ ಅಲ್ಲ, ದೇಶಪ್ರೇಮ ಆತನ ರಕ್ತ ಕಣಕಣದಲ್ಲಿಯೂ ಪುಟಿಯುತ್ತದೆ. ಆ ಹುಮ್ಮಸ್ಸು ಆತನನ್ನು ಏನು ಬೇಕಾದರೂ ಮಾಡಿಸಬಹುದು. ಬ್ರಿಟಿಷರೆಂದರೆ ಅವನಿಗೆ ಪಾಷಾಣವಿದ್ದಂತೆ. ಅದನ್ನು ದೂರ ಎಸೆದು ಸೆರೆಮನೆಯಿಂದ ತಪ್ಪಿಸಿಕೊಂಡು ಬರುತ್ತಾನೆ"[3]

ಸತ್ತು ಸ್ವರ್ಗದಲ್ಲಿರುವ ಚೆನ್ನಮ್ಮಳಿಗೆ ಕಿತ್ತೂರಿನ ಬಗೆಗಿದ್ದ ಪ್ರೀತಿ, ರಾಯಣ್ಣನ ಮೇಲಿದ್ದ ಅಭಿಮಾನ ಒಂದು ಎಳ್ಳಿನಷ್ಟು ಕಡಿಮೆಯಾಗಿರಲಿಲ್ಲ. ಸದಾ ಕಿತ್ತೂರಿನ ಧ್ಯಾನದಲ್ಲೇ ಮುಳುಗಿ ಹೋಗಿರುತ್ತಿದ್ದಳು. ಇಂತಹ ಸರಳ ಸಜ್ಜನಿಕೆಯ ಚೆನ್ನಮ್ಮಳು ಕಿತ್ತೂರಿನ ಹೆಣ್ಣು ಹುಲಿಯಂತೆ, ಸಂಸ್ಕೃತಿಯ ಸಮನ್ವಯ ಸಾರುವ ಸ್ತ್ರೀಯಾಗಿ, ಕಿತ್ತೂರಿನ ಜನತೆಯ ದೃಷ್ಟಿಯಲ್ಲಿ ತಾಯಿ ಸ್ವರೂಪಿಣಿಯಾಗಿ, ರಾಯಣ್ಣನ ಪಾಲಿಗೆ ದೈವಸಂಭೂತಳಾಗಿ, ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿತ್ವದವಳಾಗಿ, ಸಂದರ್ಭಕ್ಕೆ ತಕ್ಕಂತೆ ತನ್ನ ಸಂಪ್ರದಾಯವನ್ನು ಅನುಸರಿಸುವ ಮಾದರಿ ಸ್ತ್ರೀಯಾಗಿ ಈ ಕಾದಂಬರಿಯಲ್ಲಿ ಚಿತ್ರಿತಳಾಗಿರುವುದನ್ನು ಇಲ್ಲಿ ಚಿತ್ರಿತಳಾಗಿದ್ದಾಳೆ.

ಚೆನ್ನಮ್ಮಳು ತಂದೆ ತಾಯಿಯರ ಮುದ್ದಿನ ಮಗಳಾಗಿ ಹಾಗೂ ಎಲ್ಲಾ ರೀತಿಯ ಯುದ್ಧ ವಿದ್ಯೆಗಳು ತರಬೇತಿಯೊಂದಿಗೆ ಕರತಲಾಮಲಕವಾಗಿದ್ದವು. ಆಕೆಯ ಇಷ್ಟದಂತೆ ಹಾಗೂ ತಮ್ಮ ಮನಸ್ಸಿಗೆ ಇಷ್ಟವಾದ ಕಿತ್ತೂರು ಒಡೆಯನಾದ ಮಲ್ಲೇಂದ್ರ ಭೂಪತಿಗೆ ಮದುವೆ ಮಾಡಿಕೊಡುತ್ತಾರೆ. ಆಕೆಯ ನಿರ್ಧಾರವೇ ಅಂತಿಮವಾಗಿರುತ್ತದೆ. ಮದುವೆಯಾಗಿ ಕಿತ್ತೂರಿಗೆ ಬರುವ ಚೆನ್ಮಮ್ಮಳು ಅರಮನೆಯ ಸಂಸ್ಕೃತಿ, ಸಂಪ್ರದಾಯಗಳಿಗೆ ತಲೆಬಾಗಿ ಅವುಗಳನ್ನು ಮುನ್ನೆಡೆಸಿಕೊಂಡು ಹೋಗುವ ಸಹಚಾರಿಣಿಯಾಗಿ ಕಂಡು ಬಂದಿದ್ದಾಳೆ. ಅನಿರೀಕ್ಷಿತ ಗಂಡಂದಿರುಗಳ ಸಾವಿನಿಂದ ಧೃತಿಗೆಡದೆ ಈ ಇಬ್ಬರು ಮಹಿಳೆಯರು ತಮ್ಮ ನಾಡಿನ ಜನರ ಸುಖ ಸಂತೋಷಕ್ಕಾಗಿ ಹಗಲಿರುಳು ಎನ್ನದೆ ಶ್ರಮಿಸುತ್ತಾ, ಶತ್ರುಗಳ ನಾಶಕ್ಕೆ ಪಣತೊಡುವ ಧೀರೋದಾತ್ತ ಮಹಿಳೆಯರಾಗಿ ಚಿತ್ರಿತರಾಗಿದ್ದಾರೆ. ಮಲ್ಲಮ್ಮಳಿಗೆ ಮಹಿಳಾ ಸೇನೆಯ ಮುಖ್ಯಸ್ಥೆಯಾದ ಗೌರಮ್ಮಳ ಸಹಾಯ ಸಹಕಾರ ಜೊತೆಗೆ ಮುಖ್ಯ ಸೇನಾಧಿಪತಿಯ ವೀರಭದ್ರಗೌಡನ

ಸಹಾಯವೂ ಈಕೆಗೆ ಶ್ರೀರಕ್ಷೆಯಂತೆ ಕೆಲಸ ಮಾಡುತ್ತದೆ. ಅಂತೆಯೇ ಚೆನ್ನಮ್ಮಳಿಗೆ ಮಹಾಮಂತ್ರಿ ಕಣ್ಣೂರು ಮಲ್ಲಪ್ಪ, ಸರದಾರ ಗುರು ಸಿದ್ದಪ್ಪನವರ ಸಹಕಾರದ ಹಸ್ತದಿಂದ ಕಿತ್ತೂರು ಸಂಸ್ಥಾನದ ಉಳಿವಿಗಾಗಿ ಹೋರಾಟ ಮಾಡುತ್ತಾಳೆ. ಕೊನೆಗೆ ಶತ್ರುಗಳ ಕುತಂತ್ರದಿಂದಾಗಿ ಸೆರೆಸಿಕ್ಕಿ ಈ ಸ್ತ್ರೀಪಾತ್ರಗಳು ಕೊನೆಯಾಗುವುದು ನಿಜಕ್ಕೂ ದುರಂತದ ಚಿತ್ರಣಗಳನ್ನು ಇಲ್ಲಿ ವ್ಯಾಖ್ಯಾನಿಸಲಾಗಿದೆ.

ಹೀಗೆ ರಾಣಿ ಚನ್ನಮ್ಮಳ ಸಾಂಸ್ಕೃತಿಕ ಪ್ರಜ್ಞೆಯು ವಿವಿಧ ಹಂತಗಳಲ್ಲಿ ಪ್ರಮುಖವಾಗಿ ಕಂಡು ಬಂದಿರುವುದನ್ನು ಗುರುತಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು:**

1. ಪಾಟೀಲ ಯ.ರು., (2018), ಬೆಳ್ಳಿಚುಕ್ಕಿ ಬಂಗಾರದ ಕನಸು, ರಾಜಗುರು ಸಂಸ್ಥಾನ ಕಲ್ಮಠ ಚೆನ್ನಮ್ಮ ಕಿತ್ತೂರು, ಬೆಳಗಾವಿ, ಪು.ಸಂ. 90
2. ಅದೇ, ಪು.ಸಂ. 185
3. ಅದೇ, ಪು.ಸಂ. 256

**ಪರಾಮರ್ಶನ ಗ್ರಂಥಗಳು:**

1. ಪಾಟೀಲ ಯ.ರು., (2018), ಬೆಳ್ಳಿಚುಕ್ಕಿ ಬಂಗಾರದ ಕನಸು, ರಾಜಗುರು ಸಂಸ್ಥಾನ ಕಲ್ಮಠ ಚೆನ್ನಮ್ಮ ಕಿತ್ತೂರು, ಬೆಳಗಾವಿ.
2. ರಂಗನಾಥರಾವ್ ಜಿ. ಎನ್., (2010), ಸಮುಚ್ಛಯ (ವಿಮರ್ಶಾ ಸಂಪುಟ), ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು.
3. ಶಿರಹಟ್ಟಿ ಲಕ್ಕಪ್ಪ, (1991), ವೀರರಾಣಿ ಚೆನ್ನಮ್ಮ, ಅರುಣೋದಯ ಪ್ರಕಾಶನ, ವಿಜಾಪುರ.
4. ಮಾಳವಾಡ ಶಾಂತಾದೇವಿ, (1998), ಶೂರರಾಣಿ ಚೆನ್ನಮ್ಮ, ಜಗದ್ಗುರು ಶಿವರಾತ್ರಿಶ್ವರ ಗ್ರಂಥಮಾಲಾ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.